# ಮುಂಗಾರಿನ ಆಗಮನ

ಚೈತ್ರ ಮಾಸದ ಕೊನೆಯ ದಿನಗಳು ಅವು. ಅಲ್ಲಿ ಗಿಡಮರಗಳೆಲ್ಲ ಉದುರಿಸಿದ ಹೂವಿನ ದಳಗಳು ನೆಲವನ್ನು ಮುಚ್ಚಿದ್ದವು. ಕಡುಗೆಂಪಿನ ಚೆರ್ರಿ ಹಣ್ಣುಗಳು ಮರಗಳನ್ನು ಅಲಂಕರಿಸಿದ್ದವು. ಕಣಿವೆಗಳಲ್ಲಿ ಮಗುವಿನ ಮನಸ್ಸಿನಂಥ ನಿಷ್ಕಳಂಕ ನೀರು ಲೋಕದ ಅರಿವೇ ಇಲ್ಲದೆ ಶೀತಲದಿಂದ ಹರಿಯುತ್ತಿತ್ತು. ಲೋಕದಲ್ಲಿ ವಿಷಮ ಸಂಗತಿಗಳೇ ಇಲ್ಲವೇನೋ ಎಂಬಂತೆ ಎಲ್ಲೆಲ್ಲೂ ಹಸುರು ನಳನಳಿಸುತ್ತಿತ್ತು. ನಾಳಿನ ಜೀವನ ದಾರಿಯ ಬಗ್ಗೆ ಕಟ್ಟಿಕೊಂಡಿದ್ದ ಬಣ್ಣ ಬಣ್ಣದ ಹೊಂಗನಸುಗಳು ಅವರ ಎದೆಯಲ್ಲಿ ಬೀಜ ಬಿತ್ತಿದ್ದವು. ಅಲ್ಲಿನವರು 'ಕಾಶ್ಮೀರ ದೇವರು ನಮಗೆ ನೀಡಿದ ಉಡುಗೊರೆ' ಎಂದು ಹೇಳಿದರು. ಸತ್ಯ, ಸೌಂದರ್ಯ ಮತ್ತು ಸ್ವಾತಂತ್ರ್ಯವನ್ನು ತಮ್ಮ ನೆಲದಷ್ಟೇ ಉತ್ಕಟವಾಗಿ ಪ್ರೀತಿಸುವ ಗುಣ ಕಾಶ್ಮೀರದ ಮಣ್ಣಿನದ್ದು. ಅಂತಹ ಪ್ರಕೃತಿ ಸೃಷ್ಟಿಸಿದ ನೆಲದ ಮೇಲೆ ಅಲ್ಲಿನ ತಂಪುಗಾಳಿಗೆ ಮೈ ತೆರೆದು ನಿಂತಿದ್ದ ಎಳೆಯ ಜೋಡಿಗಳು, ಮಕ್ಕಳು, ಪ್ರವಾಸಿಗರ ಕಣ್ಣುಗಳು ಹೇಳಿದವು 'ಭೂಮಿಯ ಮೇಲೆ ಕೆಡುಕೆಂಬುದೇ ಇಲ್ಲ'!

ಎವೆಮುಚ್ಚಿ ತೆರೆಯುವಷ್ಟರಲ್ಲಿ ಎಲ್ಲಿಂದಲೋ ಬಂದ ಮದ್ದುಗುಂಡುಗಳು ಅಲ್ಲಿ ಮೈಮರೆತು ವಿಹರಿಸುತ್ತಿದ್ದವರ ಎದೆ ಸೀಳಿ ನೆತ್ತರು ಹರಿಸಿದವು. ಒಂದು ಕ್ಷಣದ ಹಿಂದೆ ಸಾವಿನ ಅರಿವಿರದ ಹೊಂಗನಸಿನ ಜೋಡಿಗಳು, ಲೋಕಕ್ಕೆ ಯಾವ ಕೇಡೂ ಎಸಗದಿದ್ದ ಮಕ್ಕಳು, ಕೆಡುಕಿನ ಕಲ್ಪನೆಯೇ ಇಲ್ಲದ ಹತ್ತಾರು ದೇಹಗಳು ನೆಲಕ್ಕುರುಳಿದವು. ಕಾಶ್ಮೀರದ ಹೂಗಳ ಮೇಲೆ ನೆತ್ತರಿನ ಕಲೆ ಅಂಟಿತು. ಇಂತಹ ಭೀಕರತೆಯ ನಡುವೆಯೂ ಅಲ್ಲಿನ ಪರ್ವತ ಶ್ರೇಣಿಗಳಷ್ಟೇ ಹೃದಯವಂತರಾಗಿದ್ದ ಕಾಶ್ಮೀರಿಗರು ತಮ್ಮ ನೆಲಕ್ಕೆ ಬಂದ ಅತಿಥಿಗಳ ರಕ್ಷಣೆಗಾಗಿ ಜೀವತೆತ್ತರು. ಅಲ್ಲಿನ ಸೈಯದ್ ಅದಿಲ್ ಹುಸೇನ್ ಭಯೋತ್ಪಾದಕರ ಗುಂಡಿಗೆ ಜೀವಕಳೆದುಕೊಂಡರು. ಜೀವ ಉಳಿಸಲು ಜೀವಕೊಟ್ಟವರ ಜೀವ ಎಂದಿಗೂ ಅಳಿಯಲಾರದು. ಮಡಿದುಬಿದ್ದವರ ಕುಟುಂಬಗಳು ಭೂಮಿಯ ಮೇಲೆ ಅನಾಥವಾದವು. ವಸಂತ ಮಾಸದ ಹೆಜ್ಜೆಗಳು ಮುಂಗಾರಿನ ಮೋಡಗಳಿಗಾಗಿ ಈ ಭೂಸ್ವರ್ಗವನ್ನು ಬಿಟ್ಟು ತೆರಳುವಾಗ ರಕ್ತದ ಕಲೆಗಳನ್ನು ತಮ್ಮ ಕಾಲಿಗಂಟಿಸಿಕೊಂಡೇ ತೆರಳಿದವು. ತನ್ನ ಮೈಮೇಲೆ ಬಿದ್ದ ರಕ್ತದ ಗುರುತನ್ನೂ ಹೂವಾಗಿ ಅರಳಿಸುವ ಕಲೆ ಕಾಶ್ಮೀರ ನಾಡಿಗಿದೆ. ಕಾಶ್ಮೀರ ನಾಡಿನ ಹೃದಯವಂತಿಕೆಗೆ ಇಡೀ ಜಗತ್ತು ತಲೆಬಾಗಿತು.

ಸ್ವರ್ಗದ ಹೆಬ್ಬಾಗಿಲಿನಂತಿದ್ದ ಆ ಜಾಗ ಇಂದು ಸ್ಮಶಾನವಾಗಿದೆ. ಕೆಲವೇ ದಿನಗಳ ಹಿಂದೆ ಮದುವೆಯಾಗಿ ತನ್ನ ಸಂಗಾತಿಯೊಡನೆ ಬಂದಿದ್ದ ಹಿಮಾಂಶಿ ನರ್ವಾಲ್ ಎಂಬ ಮಹಿಳೆಯ ಕನಸಿನ ಮಹಲು ಕ್ಷಣಾರ್ಧದಲ್ಲಿ ಕುಸಿದುಬಿದ್ದಿತು. ತನ್ನ ಗಂಡನ ದೇಹದ ಬಳಿ ದಿಕ್ಕೆಟ್ಟು ಕುಳಿತಿದ್ದ ಅವಳ ಚಿತ್ರ ಜಗತ್ತಿನ ಹೃದಯವನ್ನು ಕಲಕಿತು. ಈಗ ಅವಳ ಬದುಕನ್ನು ಸುಂದರಗೊಳಿಸುವ ಸಾಮರ್ಥ್ಯ ಯಾವ ದೇವರಿಗೂ ಇಲ್ಲ! ಆದರೂ ಅವರು ಹೇಳುತ್ತಾರೆ 'ರಕ್ತಮಯ ಮಣಿಗಂಟು, ಮುರಿದ ಹಲ್ಲು, ಬೆತ್ತಲೆ ಪಾದ / ಅಮೂಲ್ಯ ರೇಶಿಮೆಯಂಥ ಹಾಸುಗಂಬಳಿಯ ನೆಲ / ಈ ನರಕ, ಈ ಸ್ವರ್ಗ, ನಮ್ಮದು' (ನಾಜಿಮ್ ಹಿಕ್ಮೆತ್ ರಾಣ್). ಯುದ್ಧದಲ್ಲಿ ಪಾಲ್ಗೊಂಡಾಗ ಮಾತ್ರ ಅದರ ಬರ್ಭರತೆ ತಿಳಿಯುತ್ತದೆ ಎಂದಲ್ಲ! ಸಕಲ ಜೀವಿಗಳನ್ನು ಪ್ರೀತಿಸುವ ಎಂಥವರಿಗೂ ಯುದ್ಧದ ಭೀಕರತೆಯನ್ನು ಕೇಳಿದರೆ, ನೋಡಿದರೆ ಹೃದಯ ಛಿದ್ರವಾಗುತ್ತದೆ. ಆದರೆ ಯುದ್ಧಗಳಿಂದಲೇ ತಮ್ಮ ಪ್ರತಿಷ್ಠೆ ಮೆರೆಯುವ, ಮಾನವ ರಕ್ತದ ಕಲೆಗಳನ್ನೇ ತಮ್ಮ ಎದೆಯ ಮೇಲೆ ಶೌರ್ಯದ ಖಿಲ್ಲತ್ತುಗಳಂತೆ ಅಂಟಿಸಿಕೊಳ್ಳುವ ಹೃದಯಹೀನರಿಗೆ ಮಾತ್ರ ಮಡಿದ ಕುಟುಂಬದವರ ನೋವು, ಸಂಕಟ ಅರ್ಥವಾಗುವುದಿಲ್ಲ! ಗಾಜಾಪಟ್ಟಿ ಮತ್ತು ಉಕ್ರೇನ್ ಮೇಲೆ ಪ್ರತಿನಿತ್ಯ ಎರಗುತಿರುವ ಮದ್ದುಗುಂಡಗಳು ಅಲ್ಲಿನ ನೆಲವನ್ನು ಮಸಣವನ್ನಾಗಿ ಮಾಡಿವೆ. 'ಪರರನ್ನು ಪ್ರೇಮಿಸುವುದೇ ಧರ್ಮ; ದ್ವೇಷವೇ ಪಾಪ' (ವಿವೇಕಾನಂದ) ಎನ್ನುವ ವಿವೇಕ ಅವರಿಗೆ ತಿಳಿದಿಲ್ಲ.

ಮುಂದೆಯೂ ವಸಂತ ಬರುತ್ತದೆ. ಆದರೆ ಹೀಗಲ್ಲ! ಕೈಯಲ್ಲಿ ಪ್ರೀತಿಯ ಹೂಗುಚ್ಛ ಹಿಡಿದು ಎಲ್ಲರನ್ನೂ ತನ್ನ ಬಳಿಗೆ ಮತ್ತೆ ಕರೆಯುತ್ತದೆ. 'ಮಹಾಚೈತ್ರ' (ಎಚ್.ಎಸ್. ಶಿವಪ್ರಕಾಶ್) ನಾಟಕದ ಕೊನೆಯ ಅಂಕದಲ್ಲೂ ಇಂತಹುದೇ ದೃಶ್ಯ. ವಿನಾಶದ ಕೊನೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ತಮ್ಮದೆಯ ಬೆಂಕಿಯನ್ನು ಆರಿಸಿಕೊಂಡ ಮಡಿವಾಳ ಮಾಚಯ್ಯ ತನ್ನ ಸಂಗಾತಿಗಳಿಗೆ ಹೇಳಿದ 'ಅಪ್ಪಣ್ಣನವರೇ, ಅಲ್ಲಿ ಆ ಜಲಪಾತ. ಎಂಥಾ ಬೆಂಕಿಯನ್ನೂ ಆರಿಸುವಷ್ಟು ನೀರು / ಅಪ್ಪಣ್ಣ: ಮಾಚಿದೇವರೆ ಪಕ್ಕದಲ್ಲಿ ಹಚ್ಚಹಸುರಿನ ಮರಗಳು. 'ಮಹಾಚೈತ್ರ'ದ ಚಿಗುರು. ನಾವು ಕಂಡ ರಕ್ತವನ್ನು ಮರೆಸುವಷ್ಟು ಹಸುರು! / ಮಡಿವಾಳ ಮಾಚಯ್ಯ ಮತ್ತು ಅಪ್ಪಣ್ಣ: ಅಲ್ಲಿ ಮಿಂದು ನಮ್ಮ ಕೈಗಳ ರಕ್ತ, ಮನಸ್ಸಿನ ಬೆಂಕಿ, ಎರಡನ್ನೂ ತೊಳೆದುಕೊಂಡು ಇನ್ನು ಮುಂದೆ ಇಹದ ಮಹಾಮನೆಗೆ' ಈ ಭೂಮಿಯಲ್ಲಿ ವಾಸಿಸುವ ಎಲ್ಲರಿಗೂ ಇಂತಹ 'ಮಹಾಚೈತ್ರ'ದ ದಿನ ಬರುತ್ತದೆ.

ಮುಂಗಾರಿನ ಆಗಮನ: ಮುಂಗಾರು ಮೋಡಗಳು ಭೂಮಿಯ ಮೇಲೆ ಕಾಲೂರುವ ಮೊದಲೇ ಕನ್ನಡದ ಕೀರ್ತಿ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳಗಿದೆ. ಸಾಹಿತ್ಯಕ್ಕಾಗಿ ನೀಡುವ ಪ್ರತಿಷ್ಠಿತ 'ಬೂಕರ್' ಪ್ರಶಸ್ತಿ ಈ ಸಲ ಕನ್ನಡದ ಮಡಿಲಿಗೆ ಬಿದ್ದಿದೆ. ನಮ್ಮ ಕನ್ನಡದ ಲೇಖಕಿ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ (ಅನುವಾದಕಿ) ನೋವಿನ ದಿನಗಳಲ್ಲೇ ಭಾರತಕ್ಕೆ ಮತ್ತು ಕರ್ನಾಟಕಕ್ಕೆ ಬೂಕರ್ ಪ್ರಶಸ್ತಿಯ ಹೂಗೊಂಚಲು ನೀಡಿದ್ದಾರೆ. ಕನ್ನಡದಂಥ ಸಣ್ಣ ಭಾಷೆ ತನ್ನೊಳಗಿನ ಸತ್ವದಿಂದ ಜಗತ್ತಿನ ವಿದ್ವಜ್ಜನರ ಗಮನ ಸೆಳೆದಿದೆ. ಕನ್ನಡದ ಕಥಾ ಪರಂಪರೆಗೆ ಒಂದು ತೀವ್ರ ಪ್ರತಿರೋಧದ ಗುಣವಿದೆ. ಪ್ರಭುತ್ವ ಮತ್ತು ಸ್ಥಾಪಿತ ಧರ್ಮಗಳನ್ನು ಪ್ರತಿರೋಧಿಸುವ ದಿಟ್ಟ ಶಕ್ತಿಯನ್ನು ಕನ್ನಡ ಕಥಾ ಸಾಹಿತ್ಯ ರೂಢಿಸಿಕೊಂಡಿದೆ. ಬಾನು ಅವರ ಆಸಕ್ತಿಯ ಕೇಂದ್ರ ಮಹಿಳಾ ಸಂವೇದನೆ. ಅದರಲ್ಲೂ ತರತಮ ಭಾವದ ಪ್ರಭುತ್ವ ಮತ್ತು ಧಾರ್ಮಿಕ ಕಟ್ಟಲೆಗಳ ವಿರುದ್ಧ ಸೆಣೆಸಾಡುವ, ಎಲ್ಲ ನಿಷೇಧಕ್ಕೊಳಗಾಗುವ ಹೆಣ್ಣು ಇವರ ಕಥನದ ಕೇಂದ್ರ. ಬಾನು ಮುಷ್ತಾಕ್ ನಿಜಕ್ಕೂ ಇಂತಹ ಪ್ರತಿರೋಧ ಪರಂಪರೆಯ ಪ್ರತಿನಿಧಿ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಎಷ್ಟೋ ಬಾರಿ ಅಳುವೆಂಬುದು ನಗುವಿಗಿಂತಲೂ ಸುಖದ ವಸ್ತು. ಎದೆಯ ಭಾರವನ್ನು ಅದು ಇಳಿಸಿದಷ್ಟು ಮನಸ್ಸಿನ ಕಲ್ಮಶವನ್ನು ಅದು ತೊಳೆದಷ್ಟು ಪಾಪವನ್ನು ಕಿತ್ತು ಅದು ಶುಚಿ ಮಾಡಿದಷ್ಟು ತೀರ್ಥ ಪ್ರಸಾದಗಳು ಮಾಡಲಾರವು.

  —ಶಿವರಾಮ ಕಾರಂತ

- ನನ್ನ ಮಾತೃಭಾಷೆಯಿಂದ ಪಡೆದ ವಿದ್ಯೆ ಚಾತುರ್ಯವೇ ಶ್ರೇಷ್ಠವಾದದ್ದು, ಪರರ ನಾಲಿಗೆಯ ಎಂಜಲು ನನಗೆ ಸವಿಯಾದೀತೇ?

  —ಗೋವಿಂದ ಪೈ

- ನಮ್ಮದಾಗಿರುವ ಭಾಗ್ಯದಲ್ಲಿಯೇ ನಾವು ಸಂತುಷ್ಟರಾಗಿರಬೇಕು. ಅನ್ಯರ ಭಾಗ್ಯವನ್ನು ಕಂಡು ಆನಂದ ಪಡಬೇಕು.

  —ಸಿದ್ದೇಶ್ವರ ಸ್ವಾಮೀಜಿ

- ನಾಳೆ ಎಂದರಾಗದು ಮುಂದೆ ಎಂದರಾಗದು ಇಂದೇ ನೀನು ನಿರ್ಣಯಿಸಬೇಕು. ಇಂದೇ ಎತ್ತಿ ಪೊರೆಯಬೇಕು. ಬೆಂಕಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ದೊರೆಯುವುದೇನು?

  —ಕುವೆಂಪು

- ವಿಪರೀತ ದಾಕ್ಷಿಣ್ಯ ಮತ್ತು ಸಂಕೋಚಗಳ ಅಣ್ಣ ಕರ್ನಾಟಕ ಮತ್ತು ಕನ್ನಡದ ವಿಷಯ ಬಂದಾಗ ಮಾತ್ರ ಯಾವುದೇ ಮುಲಾಜನ್ನೂ ತೋರಿಸಿದ್ದು ನನಗೆ ಕಂಡಿಲ್ಲ.

  – ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ಜೀವನದಲ್ಲಿ ಭಯ ಪಡುವಂಥದ್ದು ಏನೂ ಇಲ್ಲ, ಹೆಚ್ಚು ತಿಳಿದುಕೊಂಡಷ್ಟೂ ಭಯ ಕಡಿಮೆಯಾಗುತ್ತದೆ.

  – ಮೇಡಂ ಕ್ಯೂರಿ

- ಎಲ್ಲ ನೈತಿಕ ಮೌಲ್ಯಗಳನ್ನು ಸೇರಿಸಿ ಎರಕ ಹೊಯ್ದ ಅತ್ಯಂತ ಉದಾತ್ತ ಮೌಲ್ಯವೆಂದರೆ ಪ್ರಾಮಾಣಿಕತೆ.

  – ಅಂಬೇಡ್ಕರ್

- ಒಪ್ಪಿತದ ಮಾತು ತಪ್ಪಿಸಬಾರದು.

  – ಗಾದೆ